**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸೇಡಂ**

**CC No. 589/2024**

**(ಇಂದು ದಿಃ 25-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

| ಹೆಸರು ಶ್ರೀ/ಶ್ರೀಮತಿ | ಚಂದರ | CW-6 | PW-3 |
|---|---|---|---|
| ತಂದೆ/ಗಂಡನ ಹೆಸರು | ಖಾಜಾನಾಯಕ ರಾಠೋಡ | | |
| ವಯಸ್ಸು | 31 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಜಾಕನಪಲ್ಲಿ ತಾಂಡ, ತಾಃ ಸೇಡಂ | | |

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ಚಾಸಾ-1 ನನ್ನ ತಂದೆ. ಚಾಸಾ-4 ನಮ್ಮ ಮನೆ ಪಕ್ಕದವರು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನಮ್ಮ ಸಂಬಂಧಿಕರು. 2021 ರಲ್ಲಿ ಸ. 5.30-6.00 ರ ಸಮಯದಲ್ಲಿ ಆರೋಪಿಗಳು ಮತ್ತು ಚಾಸಾ-1 ರ ನಡುವೆ ಗಲಾಟೆ ಅಗಿತ್ತು. ಆಗ ನಾನು ಹೈದ್ರಬಾದನಲ್ಲೆದ್ದೆ. ಚಾಸಾ-7 ಪೂನಾದಲ್ಲಿದ್ದ. ಆರೋಪಿಗಳು ಚಾಸಾ-1 ರವರಿಗೆ ಕಟ್ಟಿಗೆಯಿಂದ ಹಲ್ಲೆ ಮಾಡಿದ್ದಾರೆ. ನನ್ನ ತಂದೆಯ ತಲೆಗೆ ಮತ್ತು ಕಾಲಿಗೆ ಹೊಡೆದಿದ್ದರು. ಚಾಸಾ-4 ಹಾಗೂ 5 ಬಂದು ಗಲಾಟೆ ಬಿಡಿಸಿದರು. ಆರೋಪಿಗಳು ಹೋಗುವಾಗ ನನ್ನ ತಂದೆಗೆ ಪ್ರಾಣ ಬೆದರಿಕೆ ಹಾಕಿ ಹೋದರು. ನಾನು ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**(ಈ ಹಂತದಲ್ಲಿ ಸ.ಸ.ಅ. ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ಗಲಾಟೆ ದಿಃ 21-05-2021 ರಂದು ಸ. 6.00 ಗಂಟೆಗೆ ಆಗಿದೆ ಎಂದರೆ ಸರಿ. ಆರೋಪಿಗಳು ನನ್ನ ತಂದೆ ತಾಯಿಯನ್ನು ತಡೆದು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದು ಜೀವಬೆದರಿಕೆ ಹಾಕಿದರು ಎಂದರೆ ಸರಿ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. GPR ವಕೀಲರಿಂದಃ-**

ಆರೋಪಿಗಳು ಮತ್ತು ನನ್ನ ನಡುವೆ ಗಲಾಟೆ ಆದಾಗಿನಿಂದ ಮಾತುಕತೆ ಇಲ್ಲ. ಪೋಲಿಸರು ಠಾಣೆಯಲ್ಲಿ ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ. ಠಾಣೆಗೆ ನಾನು, ಚಾಸಾ-3, 4, 7 ಹೋಗಿದ್ದೆವು. ಪೋಲಿಸರು ಹೇಳಿಕೆಗಳನ್ನು ನಮಗೆ ಕನ್ನಡದಲ್ಲಿ ಓದಿ ಹೇಳಿದ್ದಾರೆ. ಆರೋಪಿಗಳ ಜೊತೆ ಮೊದಲಿನಿಂದ ನಮಗೆ ವೈಮನಸ್ಸು ಇರುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆ ಆದ ಮಾರನೇ ದಿನ ಹೇಳಿಕೆ ನೀಡಿದ್ದೇನೆ. ಚಾಸಾ-1 ನನ್ನ ತಂದೆ. ಚಾಸಾ-2 ನನ್ನ ತಾಯಿ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ಸೇಡಂ.**